ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂಅಪ್ರಾ/ನಯೋಸ/DLP-56/24-25/ 640 /2025-26 ದಿನಾಂಕ : 14/05/2025
No. Date:

## "ವಸತಿ ಉದ್ದೇಶದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಆದೇಶ"

ವಿಷಯ:- ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.96/1, 96/2A1 ರ ಪೈಕಿ, 96/13, 98/2D, 98/5, 98/6, 98/7, 98/8, 98/9, 98/10, 98/11, 99/2A1 & 99/3 ರಲ್ಲಿನ ಒಟ್ಟು 7ಎ-21ಗುಂ (0-05ಗುಂಟೆ ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಶ್ರೀ ನರೇಂದ್ರ ಬಾಬು ಮತ್ತು ಇತರರ ಜಿಪಿಎದಾರರಾದ M/s CKPC Residences Pvt Ltd., ರವರ ಪರವಾಗಿ ಅನುಮೋದಿಸುವ ಕುರಿತು.

ಉಲ್ಲೇಖ:-
1. ಅರ್ಜಿದಾರರ ಮನವಿ ದಿನಾಂಕ : 11.03.2025.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಮಿತಿ ಸಭೆಯ ಠರಾವು ಸಂಖ್ಯೆ : 2.4.3/2025 ದಿನಾಂಕ.05.04.2025.
3. ಈ ಕಛೇರಿ ಪತ್ರ ಬೆಂಅಪ್ರಾ/ನಯೋಸ/DLP-56/24-25/443/2024-25 ದಿನಾಂಕ: 05.05.2024.
4. ಕೆನರಾ ಬ್ಯಾಂಕ್ ಚಲನ್ ನಂ. GN25051107, ದಿನಾಂಕ :07.05.2025.
5. ಪ್ರಾಧಿಕಾರದ ಆರ್ಥಿಕ ಸದಸ್ಯರ ವಿಭಾಗದವರು ದೃಢೀಕರಿಸಿರುವ ದಿನಾಂಕ: 07.05.2025.
6. ತಹಶೀಲ್ದಾರ್, ಯಲಹಂಕ ರವರಿಗೆ ಈ ಕಛೇರಿ ಪತ್ರ ಸಂಖ್ಯೆ:ಬೆಂಅಪ್ರಾ/ನಯೋಸ/DLP-56/24-25/471/2024-25 ದಿನಾಂಕ: 06.05.2024.
7. ಪ್ರಾಧಿಕಾರದ ಸುತ್ತೋಲೆ ಸಂಖ್ಯೆ:ಬೆಂಅಪ್ರಾ/ಆಯು/ನಯೋಸ/510/2025-26 ದಿನಾಂಕ: 08.05.2025.

*****

ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.96/1, 96/2A1ರ ಪೈಕಿ, 96/13, 98/2D, 98/5, 98/6, 98/7, 98/8, 98/9, 98/10, 98/11, 99/2A1 & 99/3 ರಲ್ಲಿನ ಒಟ್ಟು 7ಎ-21ಗುಂ (0-05ಗುಂಟೆ ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೊದನೆ ನೀಡುವಂತೆ ಉಲ್ಲೇಖ (1) ರಲ್ಲಿ ಶ್ರೀ ನರೇಂದ್ರ ಬಾಬು ಮತ್ತು ಇತರರ ಜಿಪಿಎದಾರರಾದ M/s CKPC Residences Pvt Ltd., ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ದಿನಾಂಕ: 05.04.2025 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಉಲ್ಲೇಖ (2) ರ ಠರಾವು ಸಂಖ್ಯೆ: 2.4.3/2025 ರಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ. "ಚರ್ಚೆಯ ನಂತರ, ಸಲ್ಲಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದ ರಿಂದ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ

ಸ.ನಂ.96/1 ರ 02ಎ-03ಗುಂ, ಸ.ನಂ.96/2ಎ1(ಪಿ) ರ 0-39ಗುಂ, ಸ.ನಂ.96/13 ರ 0-01ಗುಂ, ಸ.ನಂ.98/2D ರ 0-26ಗುಂ, ಸ.ನಂ.98/5 ರ 0-15 ಗುಂ, ಸ.ನಂ.98/6 ರ 0-37ಗುಂ, ಸ.ನಂ.98/7 ರ 0-09ಗುಂ, ಸ.ನಂ.98/8 ರ 0-14ಗುಂ, ಸ.ನಂ.98/9 ರ 0-20ಗುಂ, ಸ.ನಂ.98/10 ರ 0-20ಗುಂ, ಸ.ನಂ.98/11 ರ 0-08ಗುಂ, ಸ.ನಂ.99/2ಎ1 ರ 0-21ಗುಂ ಮತ್ತು ಸ.ನಂ.99/3 ರ 0-08 ಗುಂ ಒಟ್ಟು 07ಎ-21ಗುಂ (0ಎ-05ಗುಂ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ (17) ರ ಅಡಿಯಲ್ಲಿ ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆ (ಶೈಕ್ಷಣಿಕ ಉದ್ದೇಶದ) ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (17) ರ ಅಡಿಯಲ್ಲಿ ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರು ರವರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು."

ಪ್ರಾಧಿಕಾರದ ಸಮಿತಿ ಸಭೆಯ ತೀರ್ಮಾನದಂತೆ ವಸತಿ ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ (3) ರ ಪತ್ರದಂತೆ ವಿವಿಧ ಶುಲ್ಕಗಳ ಬಾಬು ₹.37,57,670/- [ಮೂವತ್ತೇಳು ಲಕ್ಷದ ಐವತ್ತೇಳು ಸಾವಿರದ ಆರು ನೂರ ಎಪ್ಪತ್ತುಗಳು] ಗಳನ್ನು ಪ್ರಾಧಿಕಾರಕ್ಕೆ ಪಾವತಿಸುವಂತೆ ತಿಳಿಸಲಾಗಿ, ಅರ್ಜಿದಾರರು ಉಲ್ಲೇಖ (4) ರಂತೆ ದಿನಾಂಕ :07.05.2024 ರಂದು ₹.37,57,670/- [ಮೂವತ್ತೇಳು ಲಕ್ಷದ ಐವತ್ತೇಳು ಸಾವಿರದ ಆರು ನೂರ ಎಪ್ಪತ್ತುಗಳು] ಗಳನ್ನು ಕೆನರಾ ಬ್ಯಾಂಕ್ ನ ಚಲನ್ ನಂ. GN25051107 ರ ಮೂಲಕ ಪಾವತಿಸಿದ್ದು, ಪ್ರಾಧಿಕಾರದ ಆರ್ಥಿಕ ವಿಭಾಗದವರು ಉಲ್ಲೇಖ (5) ರಲ್ಲಿ ದೃಢೀಕರಿಸಿರುವಂತೆ ಸದರಿ ಮೊತ್ತವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯವಾಗಿರುತ್ತದೆ.

ಉಲ್ಲೇಖ [6] ರಲ್ಲಿ ನಮೂದಿಸಿರುವ ಈ ಕಛೇರಿ ಪತ್ರದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 363 ಬಿಎಂಆರ್ 202 (ಇ), ದಿನಾಂಕ 12.2.2024 ರ ಅನುಸಾರ ಪ್ರಶ್ನಿತ ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.96/1, 96/2A1 ರ ಪೈಕಿ, 96/13, 98/2D, 98/5, 98/6, 98/7, 98/8, 98/9, 98/10, 98/11, 99/2A1 & 99/3 ರಲ್ಲಿನ ಒಟ್ಟು 7ಎ-21ಗುಂ ವಿಸ್ತೀರ್ಣದ ಜಮೀನಗಳ ಕುರಿತು ಯಾವುದೇ ವ್ಯಾಜ್ಯ / ಪ್ರಕರಣ / ತಕರಾರುಗಳು ಇದ್ದಲ್ಲಿ 15 ದಿನಗಳೊಳಗಾಗಿ ಮಾಹಿತಿ ನೀಡಲು ತಹಶೀಲ್ದಾರ್ ರವರು ಯಲಹಂಕ ತಾಲ್ಲೂಕು ರವರನ್ನು ಕೋರಲಾಗಿತ್ತು. ಈವರೆಗೂ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 363 ಬಿಎಂಆರ್ 202 (ಇ), ದಿನಾಂಕ 12.2.2024 ರ ಅನುಸಾರ ಪ್ರಶ್ನಿತ ಜಮೀನುಗಳ ಕುರಿತು ಯಾವುದೇ ವ್ಯಾಜ್ಯ / ಪ್ರಕರಣ / ತಕರಾರುಗಳು ಇಲ್ಲವೆಂದು ಭಾವಿಸಿ ಅನುಮೋದನೆ ನೀಡಲು ಕ್ರಮವಹಿಸಲಾಗಿದೆ.

ಉಲ್ಲೇಖ (7) ರ ಪ್ರಾಧಿಕಾರದ ಸುತ್ತೋಲೆಯಂತೆ ಸದರಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ & ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಲಾದ ಪ್ರದೇಶಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿಗೆ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸುವುದು.

ವಿಷಯ:- ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.96/1, 96/2A1ಪಿ, 96/13, 98/2D, 98/5, 98/6, 98/7, 98/8, 98/9, 98/10, 98/11, 99/2A1 & 99/3 ರಲ್ಲಿನ ಒಟ್ಟು 7ಎ-21ಗುಂ (0-05ಗುಂಟೆ ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು M/s CKPC Residences Pvt Ltd., ರವರ ಪರವಾಗಿ ಅನುಮೋದಿಸುವ ಕುರಿತು.

---

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.96/1, 96/2A1ಪಿ, 96/13, 98/2D, 98/5, 98/6, 98/7, 98/8, 98/9, 98/10, 98/11, 99/2A1 & 99/3 ರಲ್ಲಿನ ಒಟ್ಟು 7ಎ-21ಗುಂ (0-05ಗುಂಟೆ ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಅನುಮೋದನೆ ನೀಡಲಾಗಿದೆ.

| | |
|---|---|
| 1 | ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ ಮತ್ತು ಬಯಲು ಜಾಗ, ರಸ್ತೆ ವಿಸ್ತರಣೆ ಪ್ರದೇಶವನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ಹಸ್ತಾಂತರಿಸುವುದು. |
| 2 | ವಿವರವಾದ ಕಟ್ಟಡ ನಕ್ಷೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು. |
| 3 | ಪ್ರಾಧಿಕಾರವು ಅನುಮೋದಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. |
| 4 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸುವ ಪ್ರದೇಶದಲ್ಲಿ ವಿವಿದ ಜಾತಿಯ ಮರಗಿಡಗಳನ್ನು ಬೆಳಸಿ ಅಭಿವೃದ್ಧಿ ಪಡಿಸುವುದು. ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 5 | ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ತೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು. ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ತೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು. |
| 6 | ವಸತಿ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಕಾಯ್ದಿರಿಸಿರುವ ಉದ್ಯಾನವನ / ಬಯಲುಜಾಗದ ಪ್ರದೇಶವು ಸೇರಿದಂತೆ ಹಾಗೂ ವಸತಿ ಅಭಿವೃದ್ಧಿ ಯೋಜನಾ ಪ್ರದೇಶದಲ್ಲಿ 240.0 ಚ.ಮೀ FAR (Builtup Area) ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸುವುದು. ಕಟ್ಟಡ ಸ್ವಾಧೀನ ಪತ್ರ ನೀಡುವ ಸಕ್ಷಮ ಪ್ರಾಧಿಕಾರವು ಸ್ವಾಧೀನ ಪತ್ರ ನೀಡುವ ಸಂದರ್ಭದಲ್ಲಿ ಸದರಿ ಗಿಡಮರಗಳ ಕನಿಷ್ಠ 2.00 ಮೀ ಎತ್ತರ ಇರುವುದನ್ನು ಖಚಿತಪಡಿಸಿಕೊಳ್ಳುವುದು. |
| 7 | ಪ್ರಸ್ತಾವನೆಗೆ ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ತಾಂತ್ರಿಕ ಅನುಮೋದನೆ ನೀಡಿರುವುದರಿಂದ, ಈ ಅನುಮೋದನೆ ದಾಖಲೆಯನ್ನು ಮಾಲೀಕತ್ವವನ್ನು ನಿರೂಪಿಸುವ ದಾಖಲೆಯೆಂದು ಪರಿಗಣಿಸಲು ಬರುವುದಿಲ್ಲ. |
| 8 | ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರವು ಪರಿಶೀಲಿಸಿಕೊಳ್ಳತಕ್ಕದ್ದು. ಸಿವಿಲ್ ಕಾಮಗಾರಿ ಮತ್ತು ಕಟ್ಟಡ ಕಾಮಾಗಾರಿಗೆ BWSSB ಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಪಡೆದು ಉಪಯೋಗಿಸಿಕೊಳ್ಳತಕ್ಕದ್ದು. |

| | |
|---|---|
| 9 | ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಕಾಯ್ದಿರಿಸಿರುವ ಸಿ.ಎ ಜಾಗವನ್ನು ಯಥಾವತ್ತಾಗಿ ಹಾಲಿ ಸ್ಥಳದಲ್ಲಿ ವಲಯ ನಿಯಮಾವಳಿಗಳ ಅಧ್ಯಾಯ 7.1.2 ರಂತೆ ಅಭಿವೃದ್ಧಿಪಡಿಸತಕ್ಕದ್ದು. |
| 10 | ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ / ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 11 | ದಿನಾಂಕ: 16/1/2010 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಹಾಗೂ ದಿನಾಂಕ: 07/01/2011 ರಂದು ಜರುಗಿದ ಸಮಿತಿ ಸಭೆಯ ವಿಷಯ ಸಂಖ್ಯೆ:09/2011ರ ತೀರ್ಮಾನದಂತೆ ಅಭಿವೃದ್ಧಿ ನಕ್ಷೆಯಲ್ಲಿ Arrangement of Blocks ಗಳನ್ನು ವಲಯನಿಯಮಾವಳಿಗಳಂತೆ ಪರಿಶೀಲಿಸಲಾಗಿದ್ದು, ಕಟ್ಟಡನಕ್ಷೆಗೆ ಸಂಬಂಧಿಸಿದ ಇತರೆ ವಿವರಗಳನ್ನು ಪರಿಶೀಲಿಸುವುದಿಲ್ಲ. ಇದನ್ನು ಕಟ್ಟಡನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ಸದರಿ ಕಟ್ಟಡ ನಿರ್ಮಾಣ ಸಂಬಂಧಿಸಿದಂತೆ ಅವಶ್ಯವಿರುವ ವಿವಿಧ ಇಲಾಖೆಗಳಿಂದ ಅಗತ್ಯ NOC ಗಳನ್ನು ಮತ್ತು ಇನ್ನಿತರೇ ಮಾಹಿತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ಪರಿಶೀಲಿಸಿಕೊಳ್ಳತಕ್ಕದ್ದು. |
| 12 | ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನುಗಳ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ / ದಾಖಲಾತಿ ನೀಡಿ ಅನುಮೋದನೆ ಪಡೆದಿದ್ದು ದೃಢಪಟ್ಟಲ್ಲಿ ಮತ್ತು ಮಾಲೀಕತ್ವದ ಬಗ್ಗೆ ನ್ಯಾಯಾಲಯದಲ್ಲಿ ತಕರಾರು ಉದ್ಭವವಾದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯನ್ನು ರದ್ದುಗೊಳಿಸುವ ಅಥವಾ ಹಿಂಪಡೆಯುವ ಅಧಿಕಾರವನ್ನು ಕೆಟಿಸಿಪಿ ಕಾಯ್ದೆ ಕಲಂ 76 (O) ರಡಿಯಲ್ಲಿ ಪ್ರಾಧಿಕಾರದ ಆಯುಕ್ತರು ಅಧಿಕಾರ ಹೊಂದಿದ್ದು, ಅದರಂತೆ ಕ್ರಮ ಜರುಗಿಸಲಾಗುವುದು. |
| 13 | ವಸತಿ ಅಭಿವೃದ್ಧಿ ಯೋಜನೆಯಲ್ಲಿನ ವಸತಿ ಘಟಕಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯಗಳ ವಿಂಗಡಣೆ ಮತ್ತು ಶೇಖರಣೆಗಾಗಿ ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 14 | ಪ್ರಶ್ನಿತ ಜಮೀನುಗಳನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಮಳೆ ನೀರು ಕೋಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಯಾವುದೇ ರೀತಿಯ ಮಳೆ ನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 15 | ಪ್ರಶ್ನಿತ ಜಮೀನುಗಳನ್ನು ಅಭಿವೃದ್ಧಿ ಪಡಿಸುವ ಸಂದರ್ಭದಲ್ಲಿ BESCOM ನಿರ್ದೇಶನದಂತೆ |

| | |
|---|---|
| | ಎಲೆಕ್ಟ್ರಿಕ್ ಕೇಬಲ್ ಗಳನ್ನು ಅಳವಡಿಸತಕ್ಕದ್ದು. |
| 16 | ನಾಲಾ ಬಫರ್ ಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳೀಯ ಸಂಸ್ಥೆ ಅಥವಾ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇತರೆ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಿಂದ Storm Water Drain ಅಥವಾ ಒಳಚರಂಡಿ ವ್ಯವಸ್ಥೆಗಳು ಹಾಗೂ ರಸ್ತೆಯನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಮುಫತ್ತಾಗಿ ಸಾರ್ವಜನಿಕ ಉಪಯೋಗಕ್ಕಾಗಿ ನೊಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸತಕ್ಕದ್ದು. |
| 17 | ರೆವಿನ್ಯೂ ದಾಖಲೆಗಳ / ಜಮೀನುಗಳ ಮಾಲೀಕತ್ವದ ದಾಖಲೆಗಳ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ಲೋಕಾಯುಕ್ತದಲ್ಲಾಗಲೀ ಯಾವುದೇ ಪ್ರಕರಣ ಇರುವುದಿಲ್ಲವೆಂದು ಸಲ್ಲಿಸಿರುವ ನೋಟರೈಸ್ಡ್ ಪ್ರಮಾಣ ಪತ್ರಕ್ಕೆ ಬದ್ಧರಾಗಿರತಕ್ಕದ್ದು. ಪ್ರಾಧಿಕಾರವು ಈ ಬಗ್ಗೆ ಜವಾಬ್ದಾರಿಯಾಗುವುದಿಲ್ಲ. |
| 18 | ವಸತಿ ಯೋಜನೆಯಲ್ಲಿನ ವಸತಿ ಘಟಕಗಳಿಗೆ ಕುಡಿಯುವ ನೀರಿಗಾಗಿ ಮತ್ತು ಇತರೆ ಉಪಯೋಗದ ನೀರಿಗಾಗಿ ಪ್ರತ್ಯೇಕವಾದ ಕೊಳಾಯಿ ವ್ಯವಸ್ಥೆಯನ್ನು (Duel piping System) ಮಾಡತಕ್ಕದ್ದು. ವಸತಿ ಘಟಕಗಳಿಂದ ಬರುವ ಕೊಳಚೆ ನೀರನ್ನು ಸಂಸ್ಕರಣೆ ಮಾಡಲು ಯೋಜನೆಯಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸಿ, ಸಂಸ್ಕರಿಸಿದ ನೀರನ್ನು ಇತರೆ ಉಪಯೋಗಗಳಿಗಾಗಿ ಉಪಯೋಗಿಸತಕ್ಕದ್ದು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. |
| 19 | BWSSB, BESCOM, KSPCB, ವಾಯುಯಾನ ಪ್ರಾಧಿಕಾರ, ಅಗ್ನಿಶಾಮಕ ಇಲಾಖೆ ಗಳಿಂದ NOC ಪಡೆದು ಕಟ್ಟಡ ನಕ್ಷೆ ಅನುಮೋದನೆ ಮೊದಲು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಿರುತ್ತದೆ. ಅನುಮತಿ ನೀಡುವ ಸಕ್ಷಮ ಪ್ರಾಧಿಕಾರವು ಅದನ್ನು ಪರಿಸೀಲಿಸಿಕೊಳ್ಳತಕ್ಕದ್ದು. |
| 20 | ಪ್ರಶ್ನಿತ ಜಮೀನುಗಳಲ್ಲಿ ಹಾದು ಹೋಗುವ ಹಳ್ಳ ಕೊಳ್ಳಗಳ ನೀರಿನ ಹರಿವಿಗೆ ಅಡಚಣೆ ಉಂಟು ಮಾಡದೆ ಸರಾಗವಾಗಿ ಹಾದು ಹೋಗುವಂತೆ ಅಭಿವೃದ್ಧಿ ಪಡಿಸುವುದು. |
| 21 | ರೇರಾ ಅಧಿನಿಯಮ, 2016 ಹಾಗೂ ಸಂಬಂದಿತ ನಿಯಮಗಳು, 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸುವುದು. |
| 22 | ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆನೀರನ್ನು ಡ್ರೈನ್ ಮುಖಾಂತರ ವ್ಯಾಲಿಗೆ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು. |
| 23 | ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು. |
| 24 | ಬಫರ್ ಪ್ರದೇಶದಲ್ಲಿ ಗಿಡಮರಗಳನ್ನು ಬೆಳಸತಕ್ಕದ್ದು. |
| 25 | ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ವಿಷಯ:- ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.96/1, 96/2A1ಪಿ, 96/13, 98/2D, 98/5, 98/6, 98/7, 98/8, 98/9, 98/10, 98/11, 99/2A1 & 99/3 ರಲ್ಲಿನ ಒಟ್ಟು 7ಎ-21ಗುಂ (0-05ಗುಂಟೆ ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು M/s CKPC Residences Pvt Ltd., ರವರ ಪರವಾಗಿ ಅನುಮೋದಿಸುವ ಕುರಿತು.

---

ಮೇಲ್ಕಂಡ ಷರತ್ತುಗಳಿಗೊಳಪಡಿಸಿ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ.96/1, 96/2A1ರ ಪೈಕಿ, 96/13, 98/2D, 98/5, 98/6, 98/7, 98/8, 98/9, 98/10, 98/11, 99/2A1 & 99/3 ರಲ್ಲಿನ ಒಟ್ಟು 7ಎ-21ಗುಂ (0-05ಗುಂಟೆ ಹೊರತುಪಡಿಸಿ) ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಅನುಮೋದಿಸಲಾಗಿದೆ.

ಆಯುಕ್ತರು
ಬೆಂಲಅಪ್ರಾ, ಬೆಂಗಳೂರು

**ಇವರಿಗೆ,**

M/s CKPC Residences Pvt Ltd.,
(ಶ್ರೀ ನರೇಂದ್ರ ಬಾಬು ಮತ್ತು ಇತರರ ಜಿಪಿಎದಾರರು)
Sy No.73 & 59/2A, Bengaluru Life sciences Park,
Oppiste WIPRO Gate 14, Electronics City Phase-1
Doddathoguru Village, Bengaluru South-560 100.

**ಪ್ರತಿಯನ್ನು:-**

1. ರಿಯಲ್ ಎಸ್ಟೇಟ್ ರೆಗ್ಯೂಲೇಟರಿ ಅಥಾರಿಟಿ [RERA], ಸಿಲ್ವರ್ ಜ್ಯೂಬಿಲಿ ಬ್ಲಾಕ್, 3 ನೇ ಕ್ರಾಸ್ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-560 002 ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯತಿ ಯಲಹಂಕ ಹೋಬಳಿ ಬೆಂಗಳೂರು ರವರಿಗೆ ಸದರಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ / ಬಯಲು ಜಾಗ & ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಲಾದ ಪ್ರದೇಶಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಂಡು ನೊಂದಾಯಿತ ಪರಿತ್ಯಾಜನಾ ಪತ್ರದ ಪ್ರತಿಯನ್ನು ಈ ಕಛೇರಿಗೆ ಕಳುಹಿಸುವಂತೆ ತಿಳಿಸಿದೆ.
2. ಅಭಿಯಂತರ ಸದಸ್ಯರು, ಬೆಂಲಅಪ್ರಾ, ಬೆಂಗಳೂರು ಇವರಿಗೆ ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಲಾಗಿದೆ.
3. ಕಾರ್ಯಪಾಲಕ ಅಭಿಯಂತರರು [ಡಿ.ಎಸ್.ಕೆ.ಎಲ್ ವಿಭಾಗ], ಬೆಂಲಅಪ್ರಾ, ಬೆಂಗಳೂರು ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಲಾಗಿದೆ.

ಸೂಚನೆ: 1.ವ್ಯವಸ್ಥಾಪಕರು, EDP ಶಾಖೆ ಇವರಿಗೆ ಕಳುಹಿಸುತ್ತಾ, ಇದರೊಂದಿಗೆ ಲಗತ್ತಿಸಿರುವ ಸಿ.ಡಿ.ಯಲ್ಲಿ ದಾಖಲಿಸಲಾದ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗಳ ನೀಲಿ ನಕ್ಷೆ ಮತ್ತು ಆದೇಶ ಪತ್ರ, ಇವುಗಳನ್ನು ಪ್ರಾಧಿಕಾರದ Website ನಲ್ಲಿ ಪ್ರಚುರಪಡಿಸಲು ತಿಳಿಸಲಾಗಿದೆ.

2. ಸದರಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯ ವಿವರಗಳನ್ನು ಆದೇಶದ ವಹಿಯ ಪುಟ ಸಂಖ್ಯೆ __ ರಲ್ಲಿ ನಮೂದಿಸಿದೆ.